ಕೊನೆಯಲ್ಲಿ ಅರ್ಥಶಾಸ್ತ್ರದ ನೀರಸ ಪದವಿಗೆ ತೃಪ್ತಿಪಟ್ಟುಕೊಳ್ಳಬೇಕಾಯಿತು.

ನಾನು ಚಿಕ್ಕ ವಯಸ್ಸಿನಲ್ಲೇ ಕೈಗೆ ಸಿಕ್ಕಿದ್ದನ್ನೆಲ್ಲಾ ಹುಚ್ಚಳಂತೆ ಯಾವಾಗಲೂ ಓದುತ್ತಾ ಇದ್ದೆ. ಪದವಿ ಮುಗಿಯುವ ಮೊದಲೇ ನಾನು ಕೆಲಸ ಮಾಡಲು ಶುರು ಮಾಡಿದ್ದೆ. ಮೊದಲಿಗೆ ಮೀಡಿಯಾದಲ್ಲಿ, ನಂತರ ಶೈಕ್ಷಣಿಕ ಕ್ಷೇತ್ರದಲ್ಲಿ ಕೆಲಸ ಮಾಡಿದೆ. ಈಗ ನಾರ್ವೆಯ ಒಸ್ಲೊ ವಿಶ್ವವಿದ್ಯಾನಿಲಯದಲ್ಲಿ ಪೋಸ್ಟ್ ಡಾಕ್ಟರೇಟ್ ಮಾಡುತ್ತಿದ್ದೇನೆ.

**◆ ನೀವು ಬದುಕಿನಲ್ಲಿ ಎದುರಿಸಿದ ಕಷ್ಟ, ನಷ್ಟಗಳೇನು? ಶಿಕ್ಷಣ, ಉದ್ಯೋಗ, ಮದುವೆ ಇತ್ಯಾದಿ ಇದರ ಕುರಿತು ಹೇಳಿ...**

ಪೂರ್ವ ಯುರೋಪಿನ ಕಾರ್ಮಿಕ ವರ್ಗಕ್ಕೆ ಸೇರಿದ ಮಹಿಳೆಯಾಗಿ ಶೈಕ್ಷಣಿಕ ಮತ್ತು ಅಂತರರಾಷ್ಟ್ರೀಯ ಬರವಣಿಗೆಯ ಎಲೈಟ್ ಪರಿಸರದಲ್ಲಿ ಮುನ್ನುಗ್ಗಿ ನಡೆಯುವುದು ಸುಲಭದ್ದೇನೂ ಆಗಿರಲಿಲ್ಲ. ಉಕ್ರೇನ್ ಸೇರಿದಂತೆ ಪೂರ್ವ ಯುರೋಪ್ ಖಂಡದ ಭೂಭಾಗಗಳನ್ನು ಇತರ 'ಸೋ ಕಾಲ್ಡ್ ಪಾಶ್ಚಿಮಾತ್ಯರು' ಅತೀ ಕಡಿಮೆ ಅಭಿವೃದ್ಧಿ ಹೊಂದಿದ ಭಾಗ ಅಂತ ಪರಿಗಣಿಸುತ್ತಿದ್ದರು. ಪೂರ್ವ ಯುರೋಪಿಯನ್ನರನ್ನು ಸಾಮಾನ್ಯವಾಗಿ ಅಶಿಕ್ಷಿತರು, ಅಸಭ್ಯರು ಮತ್ತೆ ಅಪಾಯಕಾರಿಗಳೆಂದು ಕೂಡ ಏಕಮಾದರಿಗೆ ಒಳಪಡಿಸಿ ನೋಡಲಾಗುತ್ತದೆ. ನಮ್ಮ ಭಾಗದ ಹೆಣ್ಣುಮಕ್ಕಳನ್ನು ಹೆಚ್ಚಾಗಿ ಭೋಗದ ವಸ್ತುಗಳು ಎಂಬಂತೆ ಬಿಂಬಿಸಲಾಗುತ್ತದೆ. ಅವರ ದೈಹಿಕ ಸೌಂದರ್ಯಕ್ಕಾಗಿ ಹೊಗಳಲಾಗುತ್ತದೆ. ಹೆಣ್ಣಿನ ಚೆಲುವನ್ನು ಕಾಯ್ದುಕೊಳ್ಳುವ ಪ್ರಯತ್ನದ ಬಗ್ಗೆ ಅಪಹಾಸ್ಯ ಮಾಡುತ್ತಲೇ, ಮತ್ತವರನ್ನ ಒಂದೋ ತಮ್ಮ ಆಟದ ವಸ್ತುಗಳಾಗಲು ಇಲ್ಲವೇ, ಗುಪ್ತ ವಿಧೇಯ ಹೆಂಡತಿಯರಾಗಲು ಲಾಯಕ್ಕಿರುವವರಂತೆ ಕಾಣಲಾಗುತ್ತದೆ. ಹೇಳಬೇಕಿಲ್ಲ ಅನ್ಕೋತೀನಿ, ನಾನು ಈ ಸಂಕುಚಿತ stereotypeಗಳಿಗೆ ಯಾವತ್ತೂ ಹೊಂದಿಕೊಳ್ಳಲೇಇಲ್ಲ. ಅವುಗಳ ವಿರುದ್ಧ ಯಾವಾಗಲೂ ಸೆಣಸುತ್ತಲೇ ಇದ್ದೆ. ನಾನು ಯಾವ ಗುರಿಯನ್ನು ಸಾಧಿಸಬೇಕೆಂದಿದ್ದೇನೋ ಅದನ್ನು ಸಾಧಿಸಲು ಸಾಕಷ್ಟು ಯೋಗ್ಯತೆ ಅಥವಾ ಬುದ್ಧಿವಂತಿಕೆ ನನಗೆ ಇಲ್ಲ ಎಂಬ impostor syndrome ಹಲವಾರು ವರ್ಷಗಳವರೆಗೂ ನನಗಿತ್ತು. ಆದರೂ ನಾನು ಯಶಸ್ವಿಯಾದೆ, ಮುಂದುವರೆದಂತೆ ನನ್ನ ನಿಜವಾದ ಮೌಲ್ಯವನ್ನು ತಿಳಿದುಕೊಂಡು ಆತ್ಮವಿಶ್ವಾಸದಿಂದ ವರ್ತಿಸುವುದನ್ನು ಕಲಿತೆ.

**◆ ನಿಮ್ಮ ಮಾತೃಭಾಷೆ ಯಾವುದು? ಮತ್ತು ನಿಮ್ಮ ಹಬ್ಬ ಆಚರಣೆಗಳ ಬಗ್ಗೆ ತಿಳಿಸಿ.**

ಮಧ್ಯ ಪೂರ್ವ ಮತ್ತು ಈಶಾನ್ಯ ಯುರೋಪ್ ಭಾಗಗಳಲ್ಲಿ ಮಾತನಾಡುವ, ಸ್ಲಾವಿಕ್ ಭಾಷಾ ಗುಂಪಿಗೆ ಸೇರಿದ ಉಕ್ರೇನಿಯನ್ ನನ್ನ ಮಾತೃಭಾಷೆ. ಇತರ ಸ್ಲಾವಿಕ್ ಭಾಷೆಗಳೆಂದರೆ Czech, Polish, Serbo-Croatian and Belarusian. ಈ ಗುಂಪಿನ ಭಾಷೆಗಳ ನಡುವೆ ಒಂದು ನಿರ್ದಿಷ್ಟ ಮಟ್ಟದ ಪರಸ್ಪರ ತಿಳಿವಳಿಕೆ ಇದೆ. ಆದರೆ ಇದು ಆಗಾಗ ಬದಲಾಗುತ್ತದೆ ಕೂಡ. ಉದಾಹರಣೆಗೆ, ಉಕ್ರೇನಿಯನ್ ಭಾಷೆ ಬೆಲರೂಸಿಯನ್ ಮತ್ತು ಪೋಲಿಷ್‌ಗೆ ಹತ್ತಿರದಲ್ಲಿದೆ. ನಾನು ನನ್ನ ಬೆಲರೂಸಿಯನ್ ಸ್ನೇಹಿತರೊಂದಿಗೆ ಮಾತನಾಡುವಾಗ, ಅವರು ಆಗಾಗ್ಗೆ ನನ್ನೊಂದಿಗೆ ಬೆಲರೂಸಿಯನ್ ಭಾಷೆಯಲ್ಲಿ ಮಾತನಾಡುತ್ತಾರೆ, ನಾನು ಅವರೊಂದಿಗೆ ಉಕ್ರೇನಿಯನ್ ಭಾಷೆಯಲ್ಲಿಯೇ ಮಾತನಾಡುತ್ತೇನೆ ಮತ್ತು ನಮ್ಮ ಭಾಷೆ ಪರಸ್ಪರರಿಗೆ ಅರ್ಥವಾಗುತ್ತದೆ. ನಮ್ಮ ಉಕ್ರೇನ್‌ನಲ್ಲಿ ತುಂಬಾ ಸುಂದರವಾದ ಪಾರಂಪರಿಕ ಹಬ್ಬಗಳಿವೆ. ಈ ಹಬ್ಬಗಳು ಸಾಮಾನ್ಯವಾಗಿ ಆರಂಭಿಕ ಮಧ್ಯಕಾಲೀನ ಯುಗದಿಂದಲೂ ಉಳಿದುಕೊಂಡು ಬಂದಿರುವ ಪೇಗನ್ ಆಚರಣೆಗಳ ಮತ್ತು ಕ್ರಿಶ್ಚಿಯನ್ ಸಂಪ್ರದಾಯಗಳ ಆಕರ್ಷಕ ಮಿಶ್ರಣವಾಗಿವೆ. ಉಕ್ರೇನ್ ಅಧಿಕೃತವಾಗಿ 10ನೇ ಶತಮಾನದ ಕೊನೆಯಲ್ಲಿ ಕ್ರಿಶ್ಚಿಯನ್ ರಾಜ್ಯವಾಯಿತು. ಆದರೆ, ಹಲವಾರು ಪೇಗನ್ ಆಚರಣೆಗಳು, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಉಳಿದುಕೊಂಡವು. ನಿಜ ಹೇಳಬೇಕೆಂದರೆ ಇವುಗಳನ್ನು, ವಿಶೇಷವಾಗಿ 20ನೇ ಶತಮಾನದ ಸೋವಿಯತ್ ಯುಗದಲ್ಲಿ ವ್ಯವಸ್ಥಿತವಾಗಿ ಅಳಿಸಿಹಾಕಲಾಯಿತು. ಉಕ್ರೇನ್ USSRನ ಭಾಗವಾಗಿದ್ದಾಗ, ಉಕ್ರೇನಿನ ಸಂಸ್ಕೃತಿ ಮತ್ತು ಭಾಷೆಯನ್ನು ರಷ್ಯಾ ಕೇಂದ್ರಿತ